ಪಿ.ಡಬ್ಲ್ಯು :1

ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ದಿನಾಂಕಃ 11-02-2026

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಮ್ ಜೆ ಎನ್ ವಕೀಲರಿಂದ**

ಆರೋಪಿ ನಮ್ಮ ಸಂಸ್ಥೆಯಲ್ಲಿ ಸುಮಾರು ಸನ್ 2020 ರಿಂದ ಗ್ರಾಹಕರಾಗಿರುತ್ತಾರೆ. ಆರೋಪಿ ನಮ್ಮ ಸಂಸ್ಥೆಯಿಂದ ಈ ಹಿಂದೆ ಸಾಲ ಪಡೆದುಕೊಂಡಿರುವುದಿಲ್ಲ. ಆರೋಪಿ ಈ ಹಿಂದೆ ನಮ್ಮ ಸಂಸ್ಥೆಯಿಂದ ಸಾಲ ಪಡೆದುಕೊಂಡಿದ್ದರು, ಅದನ್ನು ಮರುಪಾವತಿ ಮಾಡಿದ್ದಾರೆ ಎಂದರೆ ಸರಿಯಲ್ಲ.

ಈ ಪ್ರಕರಣದ ಸಾಲದ ವಿಚಾರವಾಗಿ ಸಾಲಗಾರನ ವಿರುದ್ಧ ಎಬಿಎನ್ ಪ್ರಕರಣ ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ಸಾಲಗಾರ ಸಾಲಕ್ಕಾಗಿ ಡಿಸೆಂಬರ್ 2020 ರಲ್ಲಿ ಅರ್ಜಿ ಸಲ್ಲಿಸಿದ್ದರು. ಸಾಲಗಾರನಿಗೆ ದಿನಾಂಕ 18.12.2020 ರಂದು ಸಾಲ ಮಂಜೂರು ಮಾಡಲಾಗಿದೆ. ಸಾಲದ ಬಾಬ್ತು ಜನವರಿ 2021 ನೇ ಸಾಲಿನಲ್ಲಿ ಸಾಲಗಾರನಿಂದ ಸಾಲದ ಕರಾರು ಪತ್ರ, ಡಿಮಾಂಡ ಪ್ರೊಮಿಸರಿ ನೋಟ್, ಹಣ ಪಡೆದ ರಶೀದಿಯನ್ನು ಪಡೆದುಕೊಂಡಿರುತ್ತೇವೆ. ಸಾಲಗಾರ ಡಿಸೆಂಬರ್ 2020 ರಲ್ಲಿ ಸಾಲ ಕೇಳಿ ಸಲ್ಲಿಸಿದ ಅರ್ಜಿಯ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಅದು ಸಾಲದ ಅರ್ಜಿಯಾಗಿರುತ್ತದೆ. ಅದರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿರುತ್ತದೆ. ಈಗ ತೋರಿಸುತ್ತಿರುವ ನಿಪಿ-7 ಸಾಲದ ಅರ್ಜಿ ಇರುತ್ತದೆ ಎಂದರೆ ಸರಿ. ಡಿಸೆಂಬರ್ 2020 ನೇ ಸಾಲಿನಲ್ಲಿ ಪಡೆದ ಸಾಲ ಮತ್ತು ನಿಪಿ-7 ರಲ್ಲಿ ತೋರಿಸಿದ ಸಾಲ ಬೇರೆ ಬೇರೆ ಆಗಿರುತ್ತದೆ ಎಂದರೆ ಸಾಕ್ಷಿ ಅವು ಒಂದೇ ಇರುತ್ತದೆ ಎಂದು ನುಡಿಯುತ್ತಾರೆ.

ಆರೋಪಿ ಚೆಕ್ಕನ್ನು ದಿನಾಂಕ 16.08.2022 ರಂದು ನಮ್ಮ ಸಂಸ್ಥೆಗೆ ಬಂದು ಕೊಟ್ಟಿರುತ್ತಾರೆ. ಚೆಕ್ಕ ಕೊಡುವಾಗ ನಾನು ನಮ್ಮ ಸಂಸ್ಥೆಯಲ್ಲಿ ಇದ್ದೆನು. ಆರೋಪಿ ಮೊದಲು ಸಾಲದ ಬಾಕಿ ಎಷ್ಟು ಎಂದು ಕೇಳಿಕೊಂಡು ಹೋಗಿದ್ದರು, ಆನಂತರ ಬಾಕಿ ಮೊತ್ತವನ್ನು ನಮೂದಿಸಿ ಚೆಕ್ಕ ನೀಡಿರುತ್ತಾರೆ. ಆರೋಪಿ ಮತ್ತು ಸಾಲಗಾರ ಸಾಲ ಪಡೆದ ನಂತರ ಯಾವುದೇ ಸಾಲದ ಕಂತು ಪಾವತಿ ಮಾಡಿರುವುದಿಲ್ಲ. ನಿಪಿ-1 ಚೆಕ್ಕಿನಲ್ಲಿ ಬರೆದ ಶಾಹಿಗಳಲ್ಲಿ ವ್ಯತ್ಯಾಸ ಇರುತ್ತದೆ ಎಂದರೆ ಸರಿಯಲ್ಲ. ವ್ಯತ್ಯಾಸ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿಗೆ ದಿನಾಂಕ 01.09.2022 ರಂದು ವಕೀಲರ ಮುಖಾಂತರ ನೋಟಿಸ್ ನೀಡಿರುತ್ತೇವೆ. ಸದ್ರಿ ನೋಟಿಸ್ ಆರೋಪಿಗೆ ಜಾರಿಯಾಗಿರುತ್ತದೆ. ಆರೋಪಿಗೆ ಯಾವುದೇ ನೋಟಿಸ್ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಪಿ–5 ಸುಳ್ಳು ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ನಾವು ಹೇಳಿದಂತೆ ಆರೋಪಿ ಯಾವುದೇ ಚೆಕ್ಕ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಈ ಹಿಂದೆ ಆರೋಪಿ ನಮ್ಮ ಶಾಖೆಯಿಂದ ಸಾಲ ಪಡೆದುಕೊಂಡಿದ್ದ, ಆ ಸಾಲವನ್ನು ಸಂಪೂರ್ಣವಾಗಿ ಮರುಪಾವತಿ ಮಾಡಿರುತ್ತಾರೆ, ಆ ಸಂದರ್ಭದಲ್ಲಿ ಭದ್ರತೆಗಾಗಿ ನೀಡಿದ ಚೆಕ್ಕನ್ನು ದುರುಪಯೋಗಪಡಿಸಿಕೊಂಡು ಈ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಸಹಿ ಇದೆ.**

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ., ಭಟ್ಕಳ**